# ಮೈಸೂರು ವಿಶ್ವವಿದ್ಯಾನಿಲಯ

**ಮೈಸೂರು ವಿಶ್ವವಿದ್ಯಾನಿಲಯದ ಕ್ರಾಫರ್ಡ್ ಭವನದ ಸಿಂಡಿಕೇಟ್ ಸಭಾಂಗಣದಲ್ಲಿ ದಿನಾಂಕ 20–07–2018 ರಂದು ಬೆಳಿಗ್ಗೆ 11.00 ಗಂಟೆಗೆ ಜರುಗಿದ ಸಿಂಡಿಕೇಟಿನ ವಿಶೇಷ ಸಭೆಯ ನಡಾವಳಿಗಳು.**

**ಹಾಜರಿದ್ದ ಸದಸ್ಯರು:**

| | | |
|---|---|---|
| 1. ಪ್ರೊ. ಟಿ.ಕೆ. ಉಮೇಶ್ | – | ಕುಲಪತಿಗಳು ಹಾಗೂ ಅಧ್ಯಕ್ಷರು |
| 2. ಕು.ಸಹನಾ ಶಿವಪ್ಪ | – | ಸದಸ್ಯರು |
| 3. ಪ್ರೊ. ಎಸ್.ಎಲ್.ಸುರೇಶ್ | – | ಸದಸ್ಯರು |
| 4. ಡಾ. ರಾಜಗೋಪಾಲ್ | – | ಸದಸ್ಯರು |
| 5. ಡಾ. ಎಂ.ಪ್ರೀತಿ | – | ಸದಸ್ಯರು |
| 6. ಪ್ರೊ. ಜೆ. ಸೋಮಶೇಖರ್<br>ಕುಲಸಚಿವ (ಪರೀಕ್ಷಾಂಗ) | – | ಸದಸ್ಯರು |
| 7. ಪ್ರೊ. ಆರ್.ರಾಜಣ್ಣ<br>[ಕುಲಸಚಿವ] | – | ಕುಲಸಚಿವರು ಹಾಗೂ<br>ಸದಸ್ಯ ಕಾರ್ಯದರ್ಶಿಗಳು |

**ಹಾಜರಾಗದ ಸದಸ್ಯರು:**

1. ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ
2. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ
3. ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ
4. ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ
5. ನಿರ್ದೇಶಕರು, ಪದವಿಪೂರ್ವ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ
6. ಡಾ. ಎ.ಟಿ. ಶಿವರಾಮು, ಪ್ರಾಂಶುಪಾಲರು, ಬಿಜಿಎಸ್ ಕಾಲೇಜು ಆಫ್ ಎಜುಕೇಷನ್, ಶ್ರೀ ಆದಿಚುಂಚನಗಿರಿ ಕ್ಷೇತ್ರ, ನಾಗಮಂಗಲ ತಾಲ್ಲೂಕು, ಮಂಡ್ಯ ಜಿಲ್ಲೆ – 571 811

ಮೊದಲಿಗೆ ಸನ್ಮಾನ್ಯ ಕುಲಪತಿಗಳು ಸಿಂಡಿಕೇಟ್‌ನ ವಿಶೇಷ ಸಭೆಗೆ ಆಗಮಿಸಿದ್ದ ಎಲ್ಲಾ ಸದಸ್ಯರುಗಳನ್ನು ಆಹ್ವಾನಿಸಿದರು. ಮುಂದುವರೆದು, ಸಕಾರದ ಪ್ರತಿನಿಧಿಗಳಾಗಿ ನಾಮನಿರ್ದೇಶನಗೊಂಡು ಸಿಂಡಿಕೇಟ್ ಸದಸ್ಯರಾಗಿದ್ದ ಪ್ರೊ. ಡಿ. ನಂಜುಂಡಯ್ಯ, ಶ್ರೀ ಲಯನ್ ಹೆಚ್. ರಮೇಶ್, ಶ್ರೀ ಮಹಮದ್ ಅಬ್ದುಸ್ಸಲಾಂ, ಶ್ರೀಮತಿ ಶೃತಿತರುಣ್‌ಗಿರಿ, ಶ್ರೀ ಎಂ.ಎಸ್.ಎಸ್. ಕುಮಾರ್, ಹಾಗೂ ಪ್ರೊ. ಕುಮಾರ್ ಇವರುಗಳ ಸೇವೆಯನ್ನು ಸ್ಮರಿಸಿ ದಾಖಲಿಸಲಾಯಿತು.

ನಂತರ ಕಾರ್ಯಸೂಚಿಯನ್ನು ಕೈಗೆತ್ತಿಕೊಳ್ಳಲಾಯಿತು.

| | |
|---|---|
| ವಿಷಯ ಸಂಖ್ಯೆ: 1 | ಮೈಸೂರು ವಿಶ್ವವಿದ್ಯಾನಿಲಯದ ಬೋಧಕ ಹುದ್ದೆಗಳ ನೇಮಕಾತಿಗಾಗಿ ವಿಭಾಗವಾರು ಹುದ್ದೆಗಳನ್ನು ಗುರುತಿಸಲು ರಚಿಸಿರುವ ಸಮಿತಿಯು ಸಲ್ಲಿಸಿರುವ ವರದಿ ಬಗೆಗೆ |
| **ತೀರ್ಮಾನ** | ಮೈಸೂರು ವಿಶ್ವವಿದ್ಯಾನಿಲಯದ ಬೋಧಕ ಹುದ್ದೆಗಳ ನೇಮಕಾತಿಗಾಗಿ ವಿಭಾಗವಾರು ಹುದ್ದೆಗಳನ್ನು ಗುರುತಿಸಲು ರಚಿಸಿರುವ ಸಮಿತಿಯು ಸಲ್ಲಿಸಿರುವ ವರದಿಯಲ್ಲಿ 371 J ಗೆ ಸಂಬಂಧಿಸಿದಂತೆ ಮಾತ್ರ ಅಧಿಸೂಚನೆಯನ್ನು ಹೊರಡಿಸಲು ಸಭೆಯು ತೀರ್ಮಾನಿಸಿ, ಸರ್ಕಾರದ 371 J ಘಟಕದ ಗಮನಕ್ಕೆ ಹಾಗೂ ಯುಜಿಸಿಯು ದಿನಾಂಕ 19.07.2018ರಂದು ನೀಡಿರುವ ಪತ್ರವನ್ನು ಸರ್ಕಾರದ ಅವಗಾಹನೆಗೆ ತರಲು ನಿರ್ಧರಿಸಲಾಯಿತು. |

| | |
|---|---|
| **ವಿಷಯ ಸಂಖ್ಯೆ: 2** | ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಬೋಧಕೇತರ ನೇಮಕಾತಿಯಲ್ಲಿ ಅಕ್ರಮ ನಡೆದಿರುವ ಕುರಿತು ಪ್ರಧಾನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ, ಬೆಂಗಳೂರು ಇವರು ಕಳುಹಿಸಿರುವ ಪತ್ರ ಮತ್ತು ತನಿಖಾ ವರದಿಯ ಬಗೆಗೆ. |
| **ತೀರ್ಮಾನ** | ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಬೋಧಕೇತರ ನೇಮಕಾತಿಯಲ್ಲಿ ಅಕ್ರಮ ನಡೆದಿರುವ ಕುರಿತ ಪ್ರಕರಣದಲ್ಲಿ ಮಾನ್ಯ ಕುಲಪತಿಗಳು ಈಗಾಗಲೇ ತೆಗೆದುಕೊಂಡಿರುವ ಕ್ರಮವನ್ನು ಸಿಂಡಿಕೇಟ್ ಅನುಸಮರ್ಥಿಸಿ ಮತ್ತು ಸರ್ಕಾರಕ್ಕೆ ಈಗಾಗಲೇ ಪತ್ರಗಳನ್ನು ಬರೆದಿರುವುದರಿಂದ ಸರ್ಕಾರದ ಮುಂದಿನ ನಿರ್ದೇಶನದಂತೆ ಕ್ರಮ ಜರುಗಿಸಲು ತೀರ್ಮಾನಿಸಲಾಯಿತು. ಹಾಗೂ ಸಿಂಡಿಕೇಟ್ ಸಭೆಯ ಈ ನಿರ್ಧಾರವನ್ನು ಸರ್ಕಾರದ ಅವಗಾಹನೆಗೆ ಕೂಡಲೇ ತರಲು ಸಹ ತೀರ್ಮಾನಿಸಲಾಯಿತು. (ಈ ವಿಷಯದ ಚರ್ಚೆ ಮತ್ತು ನಿರ್ಧಾರವನ್ನು ಕುಲಸಚಿವರ ಅನುಪಸ್ಥಿತಿಯಲ್ಲಿ ತೆಗೆದುಕೊಳ್ಳಲಾಯಿತು.) |

ಕೊನೆಯಲ್ಲಿ ಅಧ್ಯಕ್ಷರು ಎಲ್ಲರಿಗೂ ವಂದಿಸಿ, ಸಭೆಯನ್ನು ಮುಕ್ತಾಯಗೊಳಿಸಿದರು.

ಕುಲಸಚಿವ ಹಾಗೂ ಸದಸ್ಯ ಕಾರ್ಯದರ್ಶಿ　　　　ಕುಲಪತಿ ಹಾಗೂ ಅಧ್ಯಕ್ಷರು